# ಮುಂದುವರಿದ ನಗೆಪಯಣ

ರಾಜ್‌ಕುಮಾರ್ ಮೃತಪಟ್ಟ ದಿನ. ಕಂಠೀರವ ಸ್ಟುಡಿಯೊ ಆವರಣದಲ್ಲಿ 'ಮಣ್ಣುಮಾಡುವ' ರಿವಾಜುಗಳು ನಡೆಯುತ್ತಿರುವಾಗ ಹತ್ತಿರದಲ್ಲೇ ಸಾಗುತ್ತಿದ್ದ ಕುಳ್ಳಗಿನ ಯುವಕನನ್ನು ನಿಲ್ಲಿಸಿ, ಕೆಲವರು ಮೊಬೈಲ್ ಹೊರತೆಗೆದು ಕ್ಲಿಕ್ಕಿಸಿಕೊಂಡರು. ಕಣ್ಣಲ್ಲಿ ತುಂಬಿದ ನೀರಹನಿಗಳನ್ನು ಒರೆಸಿಕೊಂಡು ಭಾರವಾದ ಹೆಜ್ಜೆಗಳನ್ನು ಇಟ್ಟಿದ್ದ ಯುವಕ 'ಆನಂದ'ದಿಂದ ಪೋಸು ಕೊಡುವ ಸಮಯ ಅದಾಗಿರಲಿಲ್ಲ.

ಅಣ್ಣಾವ್ರ ಅಂತಿಮದರ್ಶನ ಮಾಡಿ, ಹೊರಬಂದ ಮೇಲೆ ಫೋಟೊ ತೆಗೆಯಲು ಮುಂದಾಗಿದ್ದವರಿಗೆಲ್ಲ, 'ಇದು ಫೋಟೊಗೆ ಸರಿಯಾದ ಟೈಮ್ ಅಲ್ಲ' ಎಂದಷ್ಟೇ ಹೇಳಿ, ಹೊರಟದ್ದು ಸಮಯಪ್ರಜ್ಞೆಗೆ ಸಾಕ್ಷಿಯಂತಿತ್ತು.

ಬಾಲನಟನಾಗಿ ಜನಪ್ರಿಯನಾಗಿದ್ದ ಯುವಕ ದೊಡ್ಡವನಾದ ಮೇಲೆ ಅಷ್ಟೇನೂ ಅವಕಾಶಗಳು ಸಿಗಲಿಲ್ಲವಲ್ಲ ಎಂಬ ಕಾರಣಕ್ಕೆ ಅಲ್ಲಿದ್ದ ಕೆಲವರು ಏನೇನೋ ಮಾತನಾಡಿಕೊಂಡರು. ಇನ್ನು ಕೆಲವರು, ಚತುರ್ಭುಜನೂ ಆಗಿದ್ದ ನಟನ ಕುಟುಂಬದ ಕುರಿತು ಕುಶಲೋಪರಿ ನಡೆಸಿದರು. 'ವಾಟ್ಸ್ ಹ್ಯಾಪನಿಂಗ್' ಎಂಬೊಂದು ಅನುಮಾನವೂ ಕಾಳಜಿಯೂ ಬೆರೆತ ಪ್ರಶ್ನೆ ಅದರಲ್ಲಿತ್ತು. ಆಗ ಪೇಚಿಗೀಡಾದ ಯುವಕ, 'ಒಂದಿಷ್ಟು ಪ್ರಾಜೆಕ್ಟ್ಸ್ ಇವೆ... ಲೆಟ್ಸ್ ಸೀ' ಎಂದಷ್ಟೇ ಹೇಳಿದ್ದರು.

ಅನಂತನಾಗ್ ಕಂಡರೆ ಈ ಯುವಕನಿಗೆ ತುಂಬಾ ಇಷ್ಟ. ಅವರ ಜೊತೆ ಅಭಿನಯಿಸಿಯೇ ಹೆಚ್ಚು ಜನಪ್ರಿಯ ಆದದ್ದು. ಜಗ್ಗೇಶ್ ಹಾಸ್ಯದ ಟೈಮಿಂಗ್‌ನಿಂದಲೂ ಮೊದಲ ಪಾಠಗಳನ್ನು ಕಲಿತದ್ದಿದೆ. ಬಾಲನಟರಾಗಿ ಮಿಂಚಿದ ಅನೇಕರು ದೊಡ್ಡವರಾದ ಮೇಲೆ ನಟರಾಗಿ ಗಮನ ಸೆಳೆಯುವುದು ವಿರಳ. ಪ್ರತಿಭೆ ಯಾವತ್ತಿದ್ದರೂ ಕ್ಲಿಕ್ ಆಗುತ್ತದೆ ಎನ್ನುವುದು ಈತನ ವಿಷಯದಲ್ಲಿ ನಿಜವಾಯಿತು. ಬಾಲ್ಯದಲ್ಲಿ ಹಿರಿತೆರೆ ಮೇಲೆ ಮಿಂಚಿದ್ದ ಅಭಿನಯದ ಟೈಮಿಂಗ್ ಕಿರುತೆರೆಗೆ ಬೇರೆ ರೀತಿ ವರ್ಗಾವಣೆಯಾಯಿತು. ಮಲಗುವ ಮೊದಲು ಪ್ರೇಕ್ಷಕರಿಗೆ ಒಂದಿಷ್ಟು ಕಚಗುಳಿ ಇಡುವಂಥ ಮೆಗಾ ಧಾರಾವಾಹಿ ಮಾಡುವುದು ನಿಜಕ್ಕೂ ಸವಾಲು. ತರ್ಕವಿಲ್ಲದೆ ಸುಖಾಸುಮ್ಮನೆ ನಗಿಸುವ ಅಂಥ ಎಪಿಸೋಡುಗಳನ್ನು ಆನಂದವಾಗಿ ಹಗ್ಗದಂತೆ ಹೊಸೆದ ಪ್ರತಿಭಾವಂತ ನಿರ್ದೇಶಕನ ಟೋಪಿ ತೊಟ್ಟಿದ್ದೇ ನಸೀಬು ಬದಲಾಯಿತು. ಟಿಆರ್‌ಪಿ ಏರಿತು. ಅಲ್ಲಿಂದಾಚೆಗೆ ತೆರೆದುಕೊಂಡದ್ದು ರಿಯಾಲಿಟಿ ಷೋ ದಿಡ್ಡಿ ಬಾಗಿಲು. ತನ್ನತನವನ್ನು ಉಳಿಸಿಕೊಂಡೂ ಪ್ರೇಕ್ಷಕರಿಂದ ಪರೀಕ್ಷೆಗೆ ಒಳಗಾಗುವ ರಿಯಾಲಿಟಿ ಷೋನಲ್ಲಿ ದೊಡ್ಡೊಡೆಯನ ಮನೆಯಿಂದ ಹೊರಹೋಗುವವರು, ಒಳಗಿದ್ದೇ ಕಾಟ ಕೊಡುವವರನ್ನು ಕಂಡರು. ಅಲ್ಲೂ ಕಚಗುಳಿ ಇಟ್ಟರು.

ಅಂಥದೊಂದು 'ರಿಯಾಲಿಟಿ ಚೆಕ್' ನಂತರ ಅವರು ಮತ್ತೆ ವೇದಿಕೆ ಮೇಲೆ ನಿಂತರು. ಹಾಸ್ಯದ ಇನ್ನೊಂದು ರಿಯಾಲಿಟಿ ಷೋದ ನಿರೂಪಕರಾದರು. ಅಲ್ಲಿ ಅವರಿಗೇ ಕಚಗುಳಿ ಇಟ್ಟಿದ್ದು, ಅಳಿಸಿದ್ದು ಮಕ್ಕಳು. ಈಗಲೂ ಅವರ ನಗೆಪಯಣ ಮುಂದುವರಿದಿದೆ; ಕಿರುತೆರೆಯಲ್ಲಿ, ಆನಂದವಾಗಿ.

**● ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68